Motion to Suspend Members

SRI B. BHASKAR SHETTY.—Sir, I move

"That Sri B. B. Sayanak, Sri N. B. Sirdesai, Sri P.A. Pawse and Sri Chavan Balavant Gopal be suspended from the services of the House till the end of the current session".

MR. SPEAKER.—The question is :

"that hon'ble Members Sri B. B. Sayanak, Sri N. B. Sirdesai, Sri P.A. Pawse and Sri Chavan Balavant Gopal be suspended from the services of the House till the end of the current session".

The Motion was Adopted

MR. SPEAKER.—Hon'ble Members shall withdraw immediately.

ಶ್ರೀ ಪಿ. ರಾಮದೇವ್. – ಸ್ವಾಮಿ ೩೩೨ನೇ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ೧೯೭೮—೭೯ನೇ ಸಾಲಿನಿಂದ ೮, ೯ ಹಾಗೂ ೧೦ನೇ ತರಗತಿಗಳಿಗೆ ಕನ್ನಡವನ್ನು ಮೂರನೇ ಭಾಷೆಯಾಗಿ ಇಡಲಾಗಿದೆ ಎಂದು ಹೇಳಿದ್ದೀರಿ. ಇದು ಸರಿಯಲ್ಲ. ಕನ್ನಡಕ್ಕೆ ೩ನೇ ಸ್ಥಾನಕ್ಕೆ ಬದಲಾಗಿ ಮೊದಲನೇ ಸ್ಥಾನವನ್ನು ಕೊಡಬೇಕು ಎಂದು ನಾನು ಪ್ರಾರ್ಥಿಸುತ್ತೇನೆ.

STARRED QUESTIONS—(contd)
(to which oral Answers were given)

Special Pay Scales for Workers in B.W.S.S.Board

726 SRI I. P. D. SALAPPA (Binnypet).—Will the Minister for Municipal Administration be pleased to state:—

(*a* whether the special pay scales have been fixed for the workers who have to work in the filthy drainages and manholes in the Municipalities and Bangalore Water Supply and Sewerage Board as announced in the G.O, No. HUD 118 MNM 77, dated 15th April 1978 :

(*b*) if not. when will it be fixed and sanctioned ?

SRI H. C. SRIKANTAIAH (Minister for Municipal Administration) –

(*a*) No.

(*b*) It is under consideration.

ಶ್ರೀ ಐ. ಪಿ. ಡಿ. ಸಾಲಪ್ಪ.—ಸ್ವಾಮಿ ಒಳಚರಂಡಿ ಕೆಲಸಗಾರರಿಗೆ ಪ್ರತ್ಯೇಕವಾದ ವೇತನಪನ್ನು ಕೊಡುತ್ತೇವೆ ಎಂದು ಸರ್ಕಾರ ಒಪ್ಪಿಕೊಂಡಿದೆ. ಆದರೆ ಇಲ್ಲಿ ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ ಈಗಾಗಲೇ ಇದನ್ನು ಒಪ್ಪಿಕೊಂಡು ಒಂದು ವರ್ಷ ೩ ತಿಂಗಳಾಗಿದೆ. ಇದನ್ನು ಕೊಡುವುದಕ್ಕೆ ಇನ್ನೂ ಎಷ್ಟು ವರ್ಷಕಾಲ ಬೇಕಾಗುತ್ತದೆ? ಇದನ್ನು ಪರಿಶೀಲನೆ ಮಾಡಿ ಯಾವಾಗ ಜಾರಿಗೆ ಕೊಡುತ್ತೀರಿ?

†ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆದಷ್ಟು ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ, ಸರ್ಕಾರ ಇದನ್ನು ತತ್ವತಃ ಒಪ್ಪಿಕೊಂಡಿದೆ. ಇದನ್ನು ಯಾವ ರೀತಿ ಮಾಡಬೇಕು ಎಂದು ಡಿವಿಜನಲ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ರೆಕಮೆಂಡೇಷನ್ ಕೇಳಿದ್ದೇವೆ. ಇದರ ಬಗ್ಗೆ ಆದಷ್ಟು ಶೀಘ್ರವಾಗಿ ತೀರ್ಮಾನ ಮಾಡುತ್ತೇವೆ.

ಶ್ರೀ ಪಿ. ಪಿ. ಡಿ. ಸಾಲಪ್ಪ.—ಆದಷ್ಟು ಶೀಘ್ರವಾಗಿ ಅಂದರೆ ೨ ತಿಂಗಳೋ, ೩ ತಿಂಗಳೋ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆದಷ್ಟು ಶೀಘ್ರವಾಗಿ ಎಂದು ನಾನು ಈಗಾಗಲೇ ಹೇಳಿದ್ದೇನೆ.

MR. SPEAKER. Question No. 368 is held over.

Promotion of Ayurveda in the State

236. SRI K. VENKATARAMAIAH (Hosadurga),—Will the Minister for Health and Family Welfare be pleased to state :—

(*a*) the number of Ayurvedic Graduates promoted during the last three yaars in the State ;

(*b*) whether reasons for Ayurveda not receiving duecncouragement as envisaged by the Government is on account of there being no Director for Ayurvedic :

(*c*) whether the Government has decided to appoint more number of Ayurvedic Doctors in the State in order to give full encouragement to the Indian system of Ayurvedic Medicine ?

SRI M. MALLAPPA (Minister for Health and Family Welfare).—

(*a*) No. Ayurvedic Graduates has been promoted so far, as the Cadre and Recruitment Rules have not yet been approved by the Government.

(*b*) The entire work of this department is being discharged by the Assistant Director on behalf of the Director satisfactorily. The necessary encouragement is also being given by the Government to this Department.

(*c*) No.

ಶ್ರೀ ಕೆ.ವೆಂಕಟರಾಮಯ್ಯ.—ಆಯುರ್ವೇದ ಡಾಕ್ಟರುಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಅವರ ನೇಮಕಗಳನ್ನು ಮಾಡಿಕೊಂಡಿಲ್ಲ ಎಂದು ಹೇಳಿದ್ದೀರಿ ಹಾಗಾದರೆ ಆಯುರ್ವೇದಕ್ಕೆ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆಯಲ್ಲ. ಆಯುರ್ವೇದ ಡಿಗ್ರಿಯನ್ನು ಪಡೆದುಕೊಂಡವರು ಬಹಳ ಜನ ಇದ್ದರೂ ಕೂಡ ಅವರನ್ನು ನೇಮಕ ಮಾಡಿಕೊಂಡಿಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಆಯುರ್ವೇದಕ್ಕೆ ಪ್ರೋತ್ಸಾಹವನ್ನು ಸರ್ಕಾರವು ಹೇಳುತ್ತಿರುವ ಮಟ್ಟಿಗೆ ಕೊಟ್ಟಿದ್ದಾರೆಯೇ

† ಶ್ರೀ ಎಂ. ಮಲ್ಲಪ್ಪ.—ಈ ಆಲಾಪೆಯ ಸಿ. ಆಂಡ್ ಆರ್. ರೂಲ್ಸ್ ಇನ್ನೂ ಫೈನಲ್ ಆಗಿಲ್ಲ, ಆದು ಆದ ಕೂಡಲೇ ಆದಷ್ಟು ಬೇಗ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.